

ಗೋಕಾಕ ಜಲಪಾತದ ವೈಭವ
ಚಿತ್ರ: ಏಕನಾಥ ಆಗಸಿಮನಿ

# ಮರೀಲಾರದ ಧಬಧಬಿ ನೆನಪು

‘ಕುಂದಾನಗರಿ’ ಎಂದು ಪ್ರೀತಿಯಿಂದ ಕರೆಸಿಕೊಳ್ಳುವ ಬೆಳಗಾವಿ, ಅತಿ ಹೆಚ್ಚು ಕಬ್ಬು ಬೆಳೆಯುವ ಜಿಲ್ಲೆ ಮಾತ್ರವಲ್ಲ, ಕಬ್ಬಿನಂಥ ಸಿಹಿನೆನಪುಗಳನ್ನು ಮೊಗೆದುಕೊಡುವ ತಾವೂ ಹೌದು. ಅಂಥದ್ದೇ ಒಂದು ನೆನಪನ್ನು ಬೆಳಗಾವಿಯ ಭಾಷೆಯಲ್ಲಿ ಹಂಚಿಕೊಂಡಿದ್ದಾರೆ

ಸಂತೋಷ ತಾಮ್ರಪರ್ಣಿ

ಆವಾಗ ನನ್ನ ಅಮ್ಮಾಅಪ್ಪಾ ಬಳ್ಳಾರಿ ಜಿಲ್ಲೆಯ ತೆಕ್ಕಲಕೋಟೆದಾಗ ಇರತಿದ್ರು. ನನ್ನಮ್ಮನ ಅವತ್ತಿನ ತವರುಮನಿ ಗೋಕಾಕ ಫಾಲ್ಸ್. ಗೋಕಾಕ ಫಾಲ್ಸ್ ಅಂದ್ರ ಬರೀ ನೀರಿನ ಫಾಲ್ಸ್ ಅಲ್ಲಾ, ಆ ಹೆಸರಿನ ಊರೂ ಅದs, ಬೆಳಗಾವಿ ಜಿಲ್ಲಾದಾಗ. ಭಾರತದ ನಯಾಗಾರ ಅಂತಾರ ಆ ಫಾಲ್ಸಿಗೆ ಅಷ್ಟು ಅದ್ಭುತ ಫಾಲ್ಸ್ ಅದು. ಗೋಕಾಕಿನ ಕರದಂಟು ನಾಲಿಗೆಗೆ ಹಬ್ಬ ಆದ್ರ, ಧಬಧಬಿ ಮನಸ್ಸಿಗೆ ಹಬ್ಬ.

ಗೋಕಾಕ್ ಫಾಲ್ಸ್ ಮೂಲತಃ ಒಂದು ಟೌನ್‌ಶಿಪ್. ಅಲ್ಲಿರುವ ಮನಿ, ಅಂಗಡಿ, ದವಾಖಾನಿ, ಮಾರ್ಕೆಟು, ಹೋಟೆಲು, ಎಲ್ಲಾ ಕಂಪನಿಯವರು ಕಟ್ಟಿಸಿಕೊಟ್ಟದ್ದು. ಫೋರ್ಬ್ಸ್ ಕಂಪನಿಯ ಅರಿವಿ ತಯಾರು ಮಾಡುವ ಗಿರಣಿ ಅದ ಅಲ್ಲಿ.

ಆವಾಗೆಲ್ಲಾ ಉಪಕಾರ ಹಿಂದೀ ಸಿನೆಮಾದ ‘ಮೇರೇ ದೇಶ್ ಕಿ ಧರತೀ ಸೋನಾ ಉಗಲೇ...’ ಹಾಡು ಭಾಳ ಫೇಮಸ್ಸು. ನಾವೆಲ್ಲಾ ಮಕ್ಕಳು ‘ಮೇರೇ ದೇಶ್ ಕಿ ಧರತೀ, ಗಿರಣ್ಯಾಗ ಬರತೀ, ಅರಳೀ ಗಂಟಾ ಹೊರತೀ, ಮೇರೇ ದೇಶ್ ಕಿ ಧರತೀ’ ಅನ್ನೋದನ್ನ ಅದೇ ಧಾಟಿಯಲ್ಲಿ ಹಾಡುತ್ತಿದ್ದೆವು.

ನಮ್ಮ ಅವ್ವಾ, ತಾತಾ ಇದ್ದ ಓಣ್ಯಾಗ ಒಟ್ಟ ನಲವತ್ತ ಮನಿ ಇದ್ದುವು. ಅವುಗಳ ವಿನ್ಯಾಸ ಭಾಳ ಮಜವಾಗಿತ್ತು. ಒಂದ ಕಡೆ ಸಾಲಾಗಿ, ಕಾಮನ್ ಗೋಡೆಯ ಹತ್ತು ಮನಿ ಇದ್ದುವು. ಐದು ಮನಿ ಆದಮ್ಯಾಲೆ ನಡಬರಕ ಒಂದು ಪಾಯಿಖಾನೆ. ಅದರಾಗ ನಾಲ್ಕು ಸಂಡಾಸಿನ ಕೋಣೆಗಳು ಮತ್ತು ಒಂದು ಕಾಂಕ್ರೀಟಿನಿಂದ ಮಾಡಿದ್ದ ನೀರಿನ ಟ್ಯಾಂಕು. ಯಾವುದೇ ಮನೆಗಳಿಗೆ ಖಾಸಗಿಯಾದ ಟಾಯ್ಲೆಟ್ ಇಲ್ಲ. ಪಾಯಿಖಾನೆ ಆದಮೇಲೆ ಮತ್ತೆ ಐದು ಮನೆಗಳು. ಹತ್ತು ಸಾಲು ಮನೆಗಳ ಮುಂದ ಅಷ್ಟೇ ಉದ್ದನೆಯ ನಾಲ್ಕು ಫೂಟಿನ ಕಟ್ಟಿ. ಆ ಕಟ್ಟಿ ಹತ್ತಿ ಹೋಗಲಿಕ್ಕೆ ನಡಬರಕ ನಾಕ ಪಾವಟಿಗೆಗೋಳು. ಕಟ್ಟಿ ಮ್ಯಾಲೆ ಇದೇ ಥರದ್ದ ಮತ್ತ ಹತ್ತು ಮನಿಗೋಳು. ಎರಡೂ ಸಾಲಿನ ಮನೆಗಳ ನಡುವೆ ಸುಮಾರು ಐವತ್ತು ಫೂಟಿನ ಅಂತರವಿತ್ತು. ಈ ಇಪ್ಪತ್ತು ಮನೆಗಳ ಪಕ್ಕದಲ್ಲಿ ಇದೇ ಥರದ ಇಪ್ಪತ್ತು ಮನೆಗಳು. ಇವೆರಡರ ಮಧ್ಯದಲ್ಲಿ ಅಗಲವಾದ ಡಾಂಬರಿನ ರಸ್ತೆ ಇತ್ತು.